# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 949
2. ಮಾನ್ಯ ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 27.12.2022
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಯುವ ರೈತರಿಗೆ ನೀಡಬೇಕಾದ ಬಾಕಿ ಮೊತ್ತ ಎಷ್ಟು;</td><td>ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಳೆದ ಮೂರು ವರ್ಷಗಳಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಕಬ್ಬಿನ ಬಿಲ್ಲನ್ನು ಪೂರ್ಣವಾಗಿ ಪಾವತಿಸಿದ್ದು ಬಾಕಿ ಇರುವುದಿಲ್ಲ. ವಿವರಗಳು ಈ ಕೆಳಕಂಡಂತೆ ಇರುತ್ತವೆ.<br>ರೂ.ಕೋಟಿಗಳಲ್ಲಿ
<table>
<tr><th>ವರ್ಷ</th><th>ಪಾವತಿಸ ಬೇಕಾದದ್ದು.</th><th>ಪಾವತಿಸಿ ರುವುದು</th><th>ಬಾಕಿ</th></tr>
<tr><td>2019-20</td><td>10428.96</td><td>10677.74</td><td>0</td></tr>
<tr><td>2020-21</td><td>13402.22</td><td>13533.08</td><td>0</td></tr>
<tr><td>2021-22</td><td>19634.84</td><td>19922.39</td><td>0</td></tr>
<tr><td>ಒಟ್ಟು</td><td>43466.02</td><td>44133.21</td><td>0</td></tr>
</table></td></tr>
<tr><td>(ಆ)</td><td>ಸಕ್ಕರೆ ಕಾರ್ಖಾನೆಗಳು ಒಂದು ಟನ್ ಕಬ್ಬಿಗೆ ನೀಡುವ ದರ ಎಷ್ಟು; ಸರ್ಕಾರವು ರೈತರಿಗೆ ನೀಡುವ ದರ ಎಷ್ಟು; ಸರ್ಕಾರವು ಕಬ್ಬಿಗೆ ನಿಗದಿಪಡಿಸಿದ ಬೆಂಬಲ ಬೆಲೆ ಎಷ್ಟು?</td><td>ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು (Commission for Agriculture Cost and Price) ಕಬ್ಬು ಬೆಳೆಯುವ ರಾಜ್ಯಗಳಿಗೆ ಭೇಟಿ ನೀಡಿ ಸಂಬಂಧಿಸಿದ ರಾಜ್ಯ ಸರ್ಕಾರ, ರೈತ ಪ್ರತಿನಿಧಿಗಳು ಮತ್ತು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳೊಡನೆ ಸಭೆ ನಡೆಸಿ, ಅಧ್ಯಯನ ನಡೆಸಿ, ಆ ವರ್ಷದ ವೈಜ್ಞಾನಿಕ ಬೆಲೆಯನ್ನು ನಿಗದಿಗೊಳಿಸಿ ಘೋಷಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುತ್ತದೆ. C.A.C.P.ಯ ವರದಿಯನ್ನು ಆಧರಿಸಿ ಸದರಿ ವರ್ಷದಲ್ಲಿ ಪ್ರತಿ ಟನ್ ಕಬ್ಬಿಗೆ ನ್ಯಾಯ ಮತ್ತು ಲಾಭದಾಯಕ ಬೆಲೆ [Fair and Remunerative Price (FRP)] ಎಂದು ಕೇಂದ್ರ ಸರ್ಕಾರವು ಘೋಷಿಸುತ್ತದೆ.<br>ಕೇಂದ್ರ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಪತ್ರ ಸಂಖ್ಯೆ 3(1)/2021-ಎಸ್‌ಪಿ-</td></tr>
</table>

| | | |
|---|---|---|
| | | ।ದಿನಾಂಕ:17.08.2022ರಲ್ಲಿ 2022-23ನೇ ಸಕ್ಕರೆ ಹಂಗಾಮಿಗೆ ಈ ಕೆಳಗಿನಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು [Fair and Remunerative Price] ನಿಗದಿಪಡಿಸಲಾಗಿರುತ್ತದೆ.<br>1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಕ್ವಿಂಟಾಲ್‌ಗೆ ಕಬ್ಬಿಗೆ ರೂ.305/-<br>2. ಶೇಕಡ 10.25 ಕ್ಕೆ ಮೇಲ್ಪಟ್ಟು ಇಳುವರಿಗೆ ನಂತರದ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್‌ಗೆ ರೂ. 3.05/- ರಂತೆ ಹೆಚ್ಚುವರಿ ಬೆಲೆ.<br>3. ಶೇಕಡ 10.25 ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.3.05 ರ ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು.<br>4. ಶೇಕಡ 9.5 ಅಥವಾ 9.5 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಕ್ವಿಂಟಾಲ್‌ಗೆ ರೂ.282.125ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ.<br>ಮೇಲ್ಕಂಡಂತೆ ನಿಗದಿಪಡಿಸಿರುವ ಎಫ್.ಆರ್.ಪಿ. ದರವನ್ನು ಮತ್ತು ರಾಜ್ಯದ ಸಕ್ಕರೆ ಕಾರ್ಖಾನೆಗಳು 2021-22ನೇ ಸಾಲಿನಲ್ಲಿ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯನ್ನು ಆಧರಿಸಿ, ಲೆಕ್ಕಾಚಾರ ಮಾಡಿ ಕಾರ್ಖಾನೆಗಳು ಕಬ್ಬು ಅರೆಯುವ ಕೆಲಸವನ್ನು ಪ್ರಾರಂಭಿಸುವ ಮೊದಲೇ, ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ ಕಲಂ 9(1) ರನ್ವಯ ಕಬ್ಬು ನಿಯಂತ್ರಣ ಮಂಡಳಿಯ ಅನುಮೋದನೆ ಪಡೆದು 2022-23ನೇ ಹಂಗಾಮಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಮೊದಲ ಕಂತಿನ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ([Fair and Remunerative Price]) ನಿಗದಿಗೊಳಿಸಿ ದಿನಾಂಕ: 18.10.2022 ರಂದು ಆದೇಶವನ್ನು ಹೊರಡಿಸಲಾಗಿದೆ. . ಈ ಬೆಲೆಯು ಎಫ್.ಆರ್.ಪಿ. ನಿಯಮದಂತೆ ಎಕ್ಸ್ ಗೇಟ್ ದರವಾಗಿರುತ್ತದೆ.<br>ಆದೇಶದ ಪ್ರತಿಯನ್ನು **ಅನುಬಂಧದಲ್ಲಿ** ಒದಗಿಸಿದೆ.<br><br>ಸದರಿ ಎಫ್.ಆರ್.ಪಿ ದರಕ್ಕೂ ಮೇಲ್ಪಟ್ಟು ದರವನ್ನು ನಿಗದಿಪಡಿಸುವಂತೆ ಕೋರಿ ರಾಜ್ಯದ ವಿವಿಧ ಭಾಗಗಳಲ್ಲಿ ಕಬ್ಬು |

ಬೆಳೆಗಾರರು ಮತ್ತು ರೈತ ಸಂಘಟನೆಗಳ ಮುಖಂಡರು ಪ್ರತಿಭಟನೆಗಳನ್ನು ನಡೆಸಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

2022-23ನೇ ಹಂಗಾಮಿಗೆ ಕೇಂದ್ರ ಸರ್ಕಾರವು ಘೋಷಿಸಿರುವ ನ್ಯಾಯ ಮತ್ತು ಲಾಭದಾಯಕ ಬೆಲೆಗಿಂತ ಹೆಚ್ಚಿಗೆ ಕಬ್ಬಿನ ದರವನ್ನು ರಾಜ್ಯ ಸರ್ಕಾರದಿಂದ ನಿಗದಿಪಡಿಸುವ ಸಂಬಂಧದ ಸಾಧಕ-ಬಾಧಕಗಳನ್ನು ಪರಿಶೀಲಿಸಲು ಮತ್ತು ಸಕ್ಕರೆ ಕಾರ್ಖಾನೆಗಳು ಸಕ್ಕರೆ, ಎಥನಾಲ್ ಮತತ್ತು ಇತರೆ ಉತ್ಪನ್ನಗಳ ಮಾರಾಟದಿಂದ ಪಡೆಯುವ ಆದಾಯದ ಅಧ್ಯಯನ ಮಾಡಿ ವರದಿ ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಸಿಐ 183 ಎಸ್‌ಜಿಎಫ್ 2022, ದಿನಾಂಕ:09.11.2022 ಹಾಗೂ ಸೇರ್ಪಡೆ ಆದೇಶ ದಿನಾಂಕ:09.11.2022ರನ್ವಯ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಲಾಗಿರುತ್ತದೆ.

ಸದರಿ ತಾಂತ್ರಿಕ ಸಮಿತಿಯು ದಿನಾಂಕ:17.11.2022 ರಂದು ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯಲ್ಲಿ 2022-23ನೇ ಹಂಗಾಮಿನ ಸಕ್ಕರೆ, ಎಥನಾಲ್ ಹಾಗೂ ಇತರೆ ಉಪ ಉತ್ಪನ್ನಗಳ ಮಾರಾಟವಾಗುವ ಬೆಲೆಗಳನ್ನು ಹಾಗೂ ಎಥನಾಲ್ ಉತ್ಪಾದಿಸಲು ತಗಲಬಹುದಾದ ಅಂದಾಜು ವೆಚ್ಚಗಳನ್ನು ವಿಶ್ಲೇಷಣೆಗಾಗಿ ಪರಿಗಣಿಸಲಾಗಿದೆ. ಅಲ್ಲದೆ, ಕೇವಲ ಸಕ್ಕರೆ ಉತ್ಪಾದನೆ ಮಾಡುವ ಕಾರ್ಖಾನೆಯ ಆದಾಯವನ್ನು ಹಾಗೂ ವಿವಿಧ ಮೂಲಗಳಿಂದ ಉತ್ಪಾದಿಸುವ ಎಥನಾಲ್‌ನಿಂದ ಸಕ್ಕರೆ ಕಾರ್ಖಾನೆಗಳಿಗೆ ಬರುವ ಹೆಚ್ಚಿನ ಲಾಭಾಂಶವನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗಿದೆ.

ರಾಜ್ಯದ ಬಹುತೇಕ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ನುರಿಸುವ ಹಂಗಾಮಿನ ಅವಧಿಯಲ್ಲಿ ಸಿರಪ್ ನಿಂದ ಹಾಗೂ ಇನ್ನುಳಿದ ಅವಧಿಗೆ ಬಿ-ಹೆವಿ ಮೊಲಾಸಿಸ್ ಉಪಯೋಗಿಸಿ ಎಥನಾಲನ್ನು ಉತ್ಪಾದಿಸಲಾಗುತ್ತಿದೆ. ತಾಂತ್ರಿಕ ಸಮಿತಿಯು ರಾಜ್ಯದ ಸಕ್ಕರೆ ಕಾರ್ಖಾನೆಗಳು ಎಥನಾಲ್ ತಯಾರಿಕೆಯಲ್ಲಿ ಬಳಸುವ ಸಿ-ಮೊಲಾಸಿಸ್, ಬಿ-ಹೆವಿ ಮೊಲಾಸಿಸ್ ಮತ್ತು ಸಿರಪ್ ಪದಾರ್ಥಗಳ ಮಾರ್ಗಗಳನ್ನು ಪರಿಗಣಿಸಿ, ಈ ಎಲ್ಲಾ ಮಾರ್ಗಗಳಿಗೆ ತಗಲುವ ವೆಚ್ಚ ಹಾಗೂ ಇತರ ಅಂಶಗಳನ್ನು ಕೂಡ ವಿಶ್ಲೇಷಣೆ ಮಾಡಿರುತ್ತದೆ. ವರದಿಯನ್ನು ಸದರಿ ತಾಂತ್ರಿಕ ಸಮಿತಿಯು ನೀಡಿದ್ದ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ,

| | | |
|---|---|---|
| | | ದಿನಾಂಕ:05.12.2022 ರಂದು ಜರುಗಿದ ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿದೆ.<br><br>ಸಕ್ಕರೆ ಉದ್ಯಮದ ಇತಿಹಾಸದಲ್ಲಿಯೇ ಎಫ್.ಆರ್.ಪಿ. ದರದ ಮೇಲೆ ಹೆಚ್ಚುವರಿಯಾಗಿ ಕಬ್ಬಿನ ಬಿಲ್ಲನ್ನು ಪಾವತಿಸಲು ಅನುಕೂಲವಾಗುವಂತೆ ಪ್ರಪ್ರಥಮ ಬಾರಿಗೆ 2022-23ನೇ ಹಂಗಾಮಿನಲ್ಲಿ ಉಪ ಉತ್ಪನ್ನವಾದ ಎಥನಾಲ್ ಅನ್ನು ಆದಾಯ ಹಂಚಿಕೆ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.<br><br>ಅದರಂತೆ, ಪ್ರಥಮ ಕಂತಿನಲ್ಲಿ ಎಫ್.ಆರ್.ಪಿ. ಜೊತೆಗೆ ಪ್ರತಿ ಮೆ.ಟನ್ ಒಂದಕ್ಕೆ ರೂ.50/- ಗಳನ್ನು ಹೆಚ್ಚುವರಿಯಾಗಿ ಪಾವತಿಸಲು ಆದೇಶ ಸಂಖ್ಯೆ: ಡಿಎಸ್‌ಕೆ/ಎಸ್.ಕೆ/04/2022-23 ದಿನಾಂಕ:05.12.2022 ರಲ್ಲಿ ಸಂಬಂಧಿಸಿದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಲಾಗಿದೆ. ಇದರಿಂದಾಗಿ ರಾಜ್ಯದ ರೈತರಿಗೆ ರೂ.204.47 ಕೋಟಿಗಳಷ್ಟು ಹೆಚ್ಚುವರಿ ಕಬ್ಬಿನ ಬೆಲೆ ಸಿಗಲಿದೆ.<br><br>2022-23ನೇ ಹಂಗಾಮು ಮುಕ್ತಾಯಗೊಂಡ ನಂತರ ಸಕ್ಕರೆ, ಎಥನಾಲ್ ಮತ್ತು ಇತರೆ ಉಪ ಉತ್ಪನ್ನಗಳ ಮಾರಾಟದಿಂದ ಬರುವ ಆದಾಯವನ್ನು ಲೆಕ್ಕಾಚಾರ ಮಾಡಿ ಕಾರ್ಖಾನೆ ಮತ್ತು ರೈತರಿಗೆ ಹಂಚಿಕೆ ಮಾಡಲಾಗುವುದು. ಇದರಿಂದ ರೈತರಿಗೆ ಹೆಚ್ಚುವರಿ ಬೆಲೆ ಸಿಗುವ ಸಾಧ್ಯತೆ ಇರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಸಿಐ 183 ಎಸ್‌ಜಿಎಫ್ 2022, ದಿನಾಂಕ:09.11.2022 ಹಾಗೂ ಸೇರ್ಪಡೆ ಆದೇಶ ದಿನಾಂಕ:09.11.2022 ರಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಿರುವುದನ್ನು ಪ್ರಶ್ನಿಸಿ, ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ ಮತ್ತು ಇತರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ:23741/2022ಅನ್ನು ದಾಖಲಿಸಿದ್ದು, ಸದರಿ ರಿಟ್ ಅರ್ಜಿಯು ವಿಚಾರಣೆಯಲ್ಲಿರುತ್ತದೆ. |

ಸಂಖ್ಯೆ: ಸಿಐ 222 ಎಸ್‌ಜಿಎಫ್ 2022

(ಶಂಕರ.ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

-ಅನುಬಂಧ-

ಆಯುಕ್ತರು
ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

ಕರ್ನಾಟಕ ಸರ್ಕಾರ

5ನೇ ಮಹಡಿ, ಎಫ್ ಬ್ಲಾಕ್, ಸಿಬಿಐಬಿ ಸಂಕೀರ್ಣ, ಕೆಹೆಚ್‌ಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009
ದೂರವಾಣಿ: 080-22133390/22133392ಫ್ಯಾಕ್ಸ್: 080-22133391
ಇಮೇಲ್: canecommissioner@gmail.com
ವೆಬ್‌ಸೈಟ್:www.canecommissionarate.karnataka.gov.in

ವಿಷಯ:-2021-22ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯ ಆಧಾರದ ಮೇಲೆ 2022-23ನೇ ಸಾಲಿಗೆ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆ (Fair and Remunerative Price) ಪ್ರಕಟಣೆಯ ಕುರಿತು.

ಉಲ್ಲೇಖ:-ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕೃಷಿ ಭವನ, ನವದೆಹಲಿ ಇವರ ಪತ್ರ ಸಂ: 3(1)/2021-ಎಸ್‌ಪಿ I ದಿನಾಂಕ 17.08.2022

-*-

**ಪೀಠಿಕೆ:**

ಕೇಂದ್ರ ಸರ್ಕಾರವು ಉಲ್ಲೇಖ (1) ರಂತೆ 2022-23ನೇ ಸಕ್ಕರೆ ಹಂಗಾಮಿಗೆ ಈ ಕೆಳಗಿನಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಪಡಿಸಿದೆ.

1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ರೂ.3050/-
2. ಶೇಕಡ 10.25 ಕ್ಕೆ ಮೇಲ್ಪಟ್ಟು ಇಳುವರಿಗೆ ನಂತರದ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.305/- ರಂತೆ ಹೆಚ್ಚುವರಿ ಬೆಲೆ.
3. ಶೇಕಡ 10.25 ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.305/-ರ ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು
4. ಶೇಕಡ 9.50 ಅಥವಾ 9.50 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.2821/- ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ.

2021-22ನೇ ಸಾಲಿನಲ್ಲಿ ರಾಜ್ಯದಲ್ಲಿ ಕಾರ್ಯನಿರ್ವಹಿಸಿರುವ 73 ಸಕ್ಕರೆ ಕಾರ್ಖಾನೆಗಳು (ಈ ಪೈಕಿ ಕೆಪಿಆರ್ ಶುಗರ್ ಅಂಡ್ ಅಪ್ಪರಲ್ಸ್ ಲಿ., ಚಿನಮಗೇರಿ ಗ್ರಾಮ, ಅಫ್‌ಜಲ್‌ಪುರ ತಾಲ್ಲೂಕು, ಕಲಬುರಗಿ ಜಿಲ್ಲೆ ಈ ಕಾರ್ಖಾನೆಯು ಪ್ರಾಯೋಗಿಕವಾಗಿ ಕಬ್ಬು ನುರಿಸಿರುತ್ತದೆ.) ಸಲ್ಲಿಸಿದ ಆರ್.ಟಿ 8(ಸಿ) ವರದಿಗಳ ಪ್ರಕಾರ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯಂತೆ 2022-23ನೇ ಕಬ್ಬು ನುರಿಸುವ ಹಂಗಾಮಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ-2014ರ ಕಲಂ 9(1) ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಪ್ರಕಟಿಸಲಾಗಿದೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಕಾರ್ಖಾನೆವಾರು ನ್ಯಾಯ ಮತ್ತು ಲಾಭದಾಯಕ ಬೆಲೆ (Fair and Remunerative Price) ನಿಗದಿಗೊಳಿಸುವ ಸಂಬಂಧ ಈ ಕೆಳಕಂಡ ಆದೇಶ ಹೊರಡಿಸಿದೆ.

Commissioner for Cane Development Director of Sugar & Addl. Regr. of Co-op. Societies in Karnataka ★ BANGALORE.

# ಆದೇಶ

ಸಂಖ್ಯೆ: ಡಿಎಸ್‌ಕೆ/ಎಸ್‌ಕೆ/04/2022-23 ದಿನಾಂಕ: 18.10.2022

ಕೇಂದ್ರ ಸರ್ಕಾರವು ಉಲ್ಲೇಖ (1) ರಂತೆ 2022-23ನೇ ಸಕ್ಕರೆ ಹಂಗಾಮಿಗೆ ನಿಗದಿಪಡಿಸಿರುವ ನ್ಯಾಯ ಮತ್ತು ಲಾಭದಾಯಕ ದರದ (Fair and Remunerative Price) ಆಧಾರದ ಮೇಲೆ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013 ಮತ್ತು ತಿದ್ದುಪಡಿ ಅಧಿನಿಯಮ 2014ರ ಕಲಂ 2(ii)(ಇಎ) ಮತ್ತು 9(1) ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಶಿವಾನಂದ ಹೆಚ್. ಕಲಕೇರಿ, ಭಾ.ರಾ.ಸೇ., ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಆದ ನಾನು 2021-22ನೇ ಸಾಲಿನಲ್ಲಿ ರಾಜ್ಯದಲ್ಲಿ ಕಾರ್ಯ ನಿರ್ವಹಿಸಿರುವ 73 ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯನ್ನು ಆಧಾರವಾಗಿಟ್ಟುಕೊಂಡು 2022-23ನೇ ಸಾಲಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ ಕಲಂ 9(1)ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಈ ಕೆಳಕಂಡಂತೆ ಅಧಿಕೃತವಾಗಿ ಪ್ರಕಟಿಸಿರುತ್ತೇನೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ. ಈ ಪ್ರಕಟಣೆಯಲ್ಲಿನ ಅಂಕಿ ಅಂಶಗಳು ಕೇಂದ್ರ ಸರ್ಕಾರವು ಕಾರ್ಖಾನೆವಾರು ಹೊರಡಿಸಿರುವ ನ್ಯಾಯ ಮತ್ತು ಲಾಭದಾಯಕ ಬೆಲೆಯ (Fair and Remunerative Price) ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

| ಕ್ರ ಸಂ. | ಸಕ್ಕರೆ ಕಾರ್ಖಾನೆಗಳ ಹೆಸರು | 2021-22ನೇ ಸಾಲಿನಲ್ಲಿ (01.07.2021 ರಿಂದ 30.06.2022 ರವರೆಗೆ) | | | 2022-23ನೇ ಸಾಲಿಗೆ ಪ್ರತಿ ಮೆ.ಟನ್ ಕಬ್ಬಿಗೆ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ) (ರೂ.ಗಳಲ್ಲಿ) |
|---|---|---|---|---|---|
| | | ನುರಿಸಿದ ಕಬ್ಬಿನ ಪ್ರಮಾಣ (ಮೆ. ಟನ್‌ಗಳಲ್ಲಿ) | ಉತ್ಪಾದಿಸಿದ ಸಕ್ಕರೆ ಪ್ರಮಾಣ (ಮೆ. ಟನ್‌ಗಳಲ್ಲಿ) | ಶೇಕಡ ಇಳುವರಿ (%) | |
| 1 | 2 | 3 | 4 | 5 | 6 |
| | ಬೆಳಗಾವಿ ಜಿಲ್ಲೆ | | | | |
| 1 | ಅರಿಹಂತ್ ಶುಗರ್ ಇಂಡಸ್ಟ್ರೀಸ್ ಲಿ, ಜೈನಾಪುರ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 396617 | 46032 | 11.60 | 3462 |
| 2 | ಅಥಣಿ ಶುಗರ್ಸ್ ಲಿ., ವಿಷ್ಣು ಅಣ್ಣಾನಗರ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ. | 1702927 | 191846 | 11.25 | 3355 |
| 3 | ಬೆಳಗಾಂ ಶುಗರ್ಸ್ ಪ್ರೈ. ಲಿ., ಹುದಲಿ, ಬೆಳಗಾವಿ ತಾಲ್ಲೂಕು & ಜಿಲ್ಲೆ | 672008 | 79328 | 11.81 | 3526 |
| | ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿ. (ದೂಧ್‌ಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ), ಚಿಕ್ಕೋಡಿ, ಬೆಳಗಾವಿ ಜಿಲ್ಲೆ | 1178485 | 126800 | 11.80 | 3523 |

BANGALORE.

| | | | | | |
|---|---|---|---|---|---|
| 5 | ಇ.ಐ.ಡಿ ಪ್ಯಾರಿ (ಇಂಡಿಯಾ) ಲಿ, (ಧನಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಖಾನ್‌ಪೇಟೆ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ. | 720757 | 83582 | 12.17 | 3636 |
| 6 | ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಗನಕೇರಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ | 322674 | 36315 | 11.25 | 3355 |
| 7 | ಗೋಕಾಕ್ ಶುಗರ್ಸ್, ಕೊಳವಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ | 580819 | 59648 | 11.70 | 3492 |
| 8 | ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ. | 508855 | 60122 | 11.81 | 3526 |
| 9 | ಹರ್ಷ ಶುಗರ್ಸ್ ಲಿ., ಸೌದತ್ತಿ, ಸೌದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 762221 | 83616 | 10.97 | 3270 |
| 10 | ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಕೇಶ್ವರ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 953463 | 110500 | 11.59 | 3459 |
| 11 | ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಕೋನಟ್ಟಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 723425 | 79263 | 11.06 | 3297 |
| 12 | ಲೈಲಾ ಶುಗರ್ಸ್ ಲಿ., (ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಕುಪ್ಪಟಗಿರಿ, ಖಾನಾಪುರ ತಾಲ್ಲೂಕು, ಬೆಳಗಾವಿ ಜಿಲ್ಲೆ. | 307976 | 35479 | 11.52 | 3437 |
| 13 | ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ | 252237 | 28870 | 11.45 | 3416 |
| 14 | ರೇಣುಕಾ ಶುಗರ್ಸ್ ಲಿ., (ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಮೇಕಳಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ. | 350971 | 36850 | 11.71 | 3495 |
| 15 | ರೇಣುಕಾ ಶುಗರ್ಸ್, ಬುರ್ಲಟ್ಟಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 1515426 | 91771 | 11.46 | 3419 |
| 16 | ರೇಣುಕಾ ಶುಗರ್ಸ್, ಮನೋಳಿ, [illegible] ತಾಲ್ಲೂಕು, ಬೆಳಗಾವಿ ಜಿಲ್ಲೆ | 1332251 | 118725 | 12.25 | 3660 |
| 17 | ಸತೀಶ್ ಶುಗರ್ಸ್ ಲಿ., ಹುಣಶ್ಯಾಳ, ಗೋಕಾಕ್ ತಾಲ್ಲೂಕು, ಬೆಳಗಾವಿ | 1627488 | 143886 | 11.70 | 3492 |

BANGALORE.

| | | | | | |
|---|---|---|---|---|---|
| 18 | ಶ್ರೀ ಸಂಗಂ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಿಡಕಲ್ ಡ್ಯಾಂ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 240749 | 27997 | 11.62 | 3468 |
| 19 | ಶಿರಗುಪ್ಪಿ ಶುಗರ್ ವರ್ಕ್ಸ್ ಲಿ., ಕಾಗವಾಡ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 863644 | 104031 | 12.05 | 3599 |
| 20 | ಶಿವಶಕ್ತಿ ಶುಗರ್ಸ್ ಲಿ., ಸೌದತ್ತಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ | 1676576 | 180016 | 11.80 | 3523 |
| 21 | ಶಿವಸಾಗರ್ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ಸ್ ಲಿ., (ಆಡಳಿತ ಮತ್ತು ಕಾರ್ಯ ನಿರ್ವಹಣೆ – ಅರಿಹಂತ ಶುಗರ್ ಇಂಡಸ್ಟ್ರೀಸ್ ಲಿ.) ಉದುಪುಡಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ. | 142145 | 16000 | 11.25 | 3355 |
| 22 | ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಿದ್ದಸಮುದ್ರ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ. | 338306 | 38494 | 11.38 | 3395 |
| 23 | ಸೌಭಾಗ್ಯಲಕ್ಷ್ಮಿ ಶುಗರ್ಸ್, ಹಿರೇನಂದಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ | 480422 | 53565 | 11.15 | 3325 |
| 24 | ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಕಾಕತಿ, ಬೆಳಗಾವಿ ಜಿಲ್ಲೆ | 195290 | 18460 | 9.45 | 2821 |
| 25 | ದಿ ಉಗಾರ್ ಶುಗರ್ಸ್ ವರ್ಕ್ಸ್ ಲಿ, ಉಗಾರ್‌ಖುರ್ದ್, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 2309453 | 263200 | 11.55 | 3447 |
| 26 | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿ., ಬೇಡ್ಕಿಹಾಳ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ. | 1053997 | 127457 | 12.02 | 3590 |
| 27 | ವಿಶ್ವರಾಜ್ ಶುಗರ್ ಇಂಡಸ್ಟ್ರೀಸ್ ಲಿ, ಬೆಲ್ಲದ ಬಾಗೇವಾಡಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 1101936 | 92700 | 12.01 | 3587 |
| | ಬಾಗಲಕೋಟೆ ಜಿಲ್ಲೆ | | | | |
| 28 | ಬಾದಾಮಿ ಶುಗರ್ಸ್ ಲಿ., ಮುಟ್ಟಲಗೇರಿ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. | 244555 | 23545 | 11.15 | 3325 |
| 29 | ಬೀಳಗಿ ಶುಗರ್ಸ್ ಲಿ., ಬಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 1351548 | 151825 | 10.87 | 3239 |
| 30 | ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ, ನಾಯಿನೇಗಲಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ | 759952 | 70001 | 11.85 | 3538 |

| | | | | | |
|---|---|---|---|---|---|
| 31 | ಜೆಮ್ ಶುಗರ್ಸ್ ಲಿ., ಕುಂದರಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 856632 | 79008 | 11.15 | 3325 |
| 32 | ಗೋದಾವರಿ ಶುಗರ್ಸ್ ಲಿ., ಸಮೀರವಾಡಿ, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 2248238 | 166538 | 11.60 | 3462 |
| 33 | ಇಂಡಿಯನ್ ಕೇನ್ ಪವರ್ ಲಿ., ಉತ್ತೂರು, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. | 2752682 | 288368 | 11.34 | 3382 |
| 34 | ಜಮಖಂಡಿ ಶುಗರ್ಸ್ ಲಿ., ಹಿರೇಪಡಸಲಗಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 1307881 | 105787 | 11.44 | 3413 |
| 35 | ಎಂಆರ್ಎನ್ ಕೇನ್ ಪವರ್ ಲಿ., ಕಲ್ಲಾಪುರ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 801585 | 55950 | 11.18 | 3334 |
| 36 | ನಿರಾಣಿ ಶುಗರ್ಸ್ ಲಿ, ಮುಧೋಳ್, ಬಾಗಲಕೋಟೆ ಜಿಲ್ಲೆ. | 2528934 | 250982 | 11.25 | 3355 |
| 37 | ಪ್ರಭುಲಿಂಗೇಶ್ವರ ಶುಗರ್ಸ್ ಲಿ., ಸಿದ್ದಾಪುರ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 1810298 | 170895 | 11.65 | 3477 |
| 38 | ಶ್ರೀ ಕೇದಾರನಾಥ್ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ಸ್ ಲಿ., ಕೆರಕಲಮಟ್ಟಿ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 362199 | 34870 | 10.84 | 3230 |
| 39 | ಶ್ರೀ ಸಾಯಿ ಪ್ರಿಯಾ ಶುಗರ್ಸ್ ಲಿ., ಹಿಪ್ಪರಗಿ/ ಮೈಗೂರು, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ, | 2127927 | 165849 | 11.25 | 3355 |
| | ಬಳ್ಳಾರಿ ಜಿಲ್ಲೆ | | | | |
| 40 | ಎನ್ಎಸ್ಎಲ್ ಶುಗರ್ಸ್ (ತುಂಗಭದ್ರ) ಲಿ., ದೇಶನೂರು, ಶಿರಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆ. | 346404 | 31265 | 9.90 | 2943 |
| | ಬೀದರ್ ಜಿಲ್ಲೆ | | | | |
| 41 | ಭಾಲ್ಕೇಶ್ವರ ಶುಗರ್ಸ್ ಲಿ., ಬಾಜೋಳಗಾ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ | 586094 | 31424 | 9.48 | 2821 |
| 42 | ಬೀದರ್ ಕಿಸಾನ್ ಸಕ್ಕರ್ ಕಾರ್ಖಾನಾ ಲಿ. ಮೊಗದಾಳ್, ಬೀದರ್ ತಾಲ್ಲೂಕು [illegible] | 419923 | 39859 | 9.49 | 2821 |
| 43 | ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ [illegible] ಹಳ್ಳಿಖೇಡ್, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ. | 54574 | 2740 | 7.89 | 2821 |
| 44 | ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ [illegible] ಚೆಕ್‌ಮತ್, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ | 578378 | 54918 | 9.50 | 2821 |

Commissioner for Cane Development Director of Sugar ★ Karnataka ★ BANGALORE

| | | | | | |
|---|---|---|---|---|---|
| 45 | ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಇಮಾಂಪುರ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ | 401678 | 38183 | 9.50 | 2821 |
| 46 | ಶ್ರೀ ಭವಾನಿ ಶುಗರ್ಸ್ ಲಿ., (ಭವಾನಿ ಖಂಡಸಾರಿ ಶುಗರ್ಸ್ ಲಿ. ಕಾರ್ಖಾನೆಯ ಗುತ್ತಿಗೆದಾರರು), ಬರೂರು ಗ್ರಾಮ, ಬೀದರ್ ಮತ್ತು ಜಿಲ್ಲೆ. | 56990 | 5176 | 9.08 | 2821 |
| | ಚಾಮರಾಜನಗರ ಜಿಲ್ಲೆ | | | | |
| 47 | ಬನ್ನಾರಿ ಅಮ್ಮನ್ ಶುಗರ್ಸ್ ಲಿ., ಕುಂತೂರು, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ | 968229 | 96244 | 9.92 | 2949 |
| | ದಾವಣಗೆರೆ ಜಿಲ್ಲೆ | | | | |
| 48 | ದಾವಣಗೆರೆ ಶುಗರ್ಸ್ ಲಿ., ಕುಕ್ಕವಾಡ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ | 471997 | 37788 | 9.49 | 2821 |
| | ಗದಗ್ ಜಿಲ್ಲೆ | | | | |
| 49 | ವಿಜಯನಗರ ಶುಗರ್ಸ್ ಲಿ., (ಮೃಢಗಿರಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಗಂಗಾಪುರ, ಮುಂಡರಗಿ ತಾಲ್ಲೂಕು, ಗದಗ್ ಜಿಲ್ಲೆ | 800915 | 69359 | 9.76 | 2901 |
| | ಹಾಸನ ಜಿಲ್ಲೆ | | | | |
| 50 | ಚಾಮುಂಡೇಶ್ವರಿ ಶುಗರ್ಸ್ ಲಿ., (ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ | 275142 | 24145 | 8.77 | 2821 |
| | ಹಾವೇರಿ ಜಿಲ್ಲೆ | | | | |
| 51 | ಜಿಎಂ ಶುಗರ್ಸ್ ಲಿ., (ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಸಂಗೂರು, ಹಾವೇರಿ ತಾಲ್ಲೂಕು ಮತ್ತು ಹಾವೇರಿ ಜಿಲ್ಲೆ. | 571485 | 54495 | 9.54 | 2833 |
| | ಕಲಬುರಗಿ ಜಿಲ್ಲೆ | | | | |
| 52 | ಕೆಪಿಆರ್ ಶುಗರ್ ಅಂಡ್ ಅಪರಲ್ಸ್ ಲಿ., ಚಿನಮಗೇರಿ, ಅಫಜಲ್‌ಪುರ ತಾಲ್ಲೂಕು, ಕಲಬುರಗಿ ಜಿಲ್ಲೆ. | 600115 | 53281 | 10.51 | 3129 |
| 53 | ಎನ್‌ಎಸ್‌ಎಲ್ ಶುಗರ್ಸ್ ಲಿ., (ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಭೂಸನೂರು, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ. | 895193 | 87728 | 9.80 | 2913 |
| 54 | ಶ್ರೀ ರೇಣುಕಾ ಶುಗರ್ಸ್, ಹವಳಗ, ಅಫಜಲ್‌ಪುರ ತಾಲ್ಲೂಕು, ಕಲಬುರಗಿ | 1350279 | 69640 | 11.01 | 3282 |

Commissioner for Cane Development & Director of Sugar in Karnataka ★ BANGALORE.

| | | | | | |
|---|---|---|---|---|---|
| 55 | ಉಗಾರ್ ಶುಗರ್ಸ್ ವರ್ಕ್ಸ್ ಲಿ., ನಾಗರಹಳ್ಳಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ | 529218 | 57533 | 10.75 | 3203 |
| | ಮಂಡ್ಯ ಜಿಲ್ಲೆ | | | | |
| 56 | ಕೋರಮಂಡಲ್ ಶುಗರ್ಸ್ ಲಿ., ಮಾಕವಳ್ಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ. | 660169 | 62714 | 9.50 | 2821 |
| 57 | ಎಂಆರ್ಎನ್ ಕೇನ್ ಪವರ್ ಅಂಡ್ ಬಯೋರಿಫೈನರೀಸ್ ಪ್ರೈ. ಲಿ., (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ | 458895 | 42266 | 9.18 | 2821 |
| 58 | ಎನ್ಎಸ್ಎಲ್ ಶುಗರ್ಸ್, ಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. | 928882 | 86307 | 9.28 | 2821 |
| 59 | ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ, ಭಾರತಿ ನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. | 978952 | 94396 | 9.64 | 2868 |
| | ಮೈಸೂರು ಜಿಲ್ಲೆ | | | | |
| 60 | ಬನ್ನಾರಿ ಅಮ್ಮನ್ ಶುಗರ್ಸ್ ಲಿ, ಅಲಗಂಚಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ | 1436032 | 136670 | 9.51 | 2824 |
| | ಉತ್ತರ ಕನ್ನಡ ಜಿಲ್ಲೆ | | | | |
| 61 | ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ, ಹಳಿಯಾಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ | 1289869 | 137893 | 10.95 | 3264 |
| | ವಿಜಯಪುರ ಜಿಲ್ಲೆ | | | | |
| 62 | ಇಂಡಿಯನ್ ಶುಗರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ | 422003 | 40092 | 9.50 | 2821 |
| 63 | ಜಮಖಂಡಿ ಶುಗರ್ಸ್ ಲಿ., (ಘಟಕ–2) ನಾದ್ ಕೆ.ಡಿ. ಇಂಡಿ ತಾಲ್ಲೂಕು ವಿಜಯಪುರ ಜಿಲ್ಲೆ | 721370 | 76037 | 11.00 | 3279 |
| 64 | ಕೆ.ಪಿ.ಆರ್. ಶುಗರ್ ಮಿಲ್ಸ್, ಅಲಮೇಲು ಗ್ರಾಮ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ | 1554068 | 130000 | 10.62 | 3163 |
| 65 | ಮನಾಲಿ ಶುಗರ್ ಲಿ., [illegible] ಗಿ ತಾಲ್ಲೂಕು, ವಿಜಯಪುರ ಜಿಲ್ಲೆ | 450879 | 42891 | 9.50 | 2821 |
| 66 | ನಂ[illegible] ಸಹಕಾರಿ ಸಕ್ಕರೆ ಕಾರ್ಖಾನೆ [illegible] ನಗರ, ವಿಜಯಪುರ [illegible] ಜಿಲ್ಲೆ | 919322 | 90753 | 11.40 | 3401 |

Commissioner for Cane Development Director of Sugar & Addl. Regr. of Co-op. Societies in Karnataka ★ BANGALORE

| | | | | | |
|---|---|---|---|---|---|
| 67 | ಸಂಗಮನಾಥ್ ಶುಗರ್ಸ್ ಲಿ., ಯರಗಲ್ ಬಿ.ಕೆ., ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ | 580088 | 59404 | 10.24 | 3047 |
| 68 | ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್ ಪ್ರೈ.ಲಿ. ಯರಗಲ್, ಮುದ್ದೇಬಿಹಾಳ್ ತಾಲ್ಲೂಕು, ವಿಜಯಪುರ ಜಿಲ್ಲೆ | 1067053 | 98382 | 10.80 | 3218 |
| 69 | ಶ್ರೀ ಬಸವೇಶ್ವರ ಶುಗರ್ಸ್ ಲಿ., ಕಾರಜೋಳ್, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ | 902493 | 99780 | 11.05 | 3294 |
| 70 | ಶ್ರೀ ಭೀಮಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮರಗೂರು, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | 534754 | 54710 | 10.23 | 3044 |
| | ವಿಜಯನಗರ ಜಿಲ್ಲೆ | | | | |
| 71 | ಮೈಲಾರ ಶುಗರ್ಸ್ ಲಿ., ಬೀರಬ್ಬಿ, ಹೂವಿನಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ | 510934 | 39460 | 9.68 | 2876 |
| 72 | ಶ್ಯಾಮನೂರು ಶುಗರ್ಸ್ ಲಿ., ದುಗ್ಗಾವತಿ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ | 426984 | 28222 | 9.35 | 2821 |
| | ಯಾದಗಿರಿ ಜಿಲ್ಲೆ | | | | |
| 73 | ಕೋರ್‌ಗ್ರೀನ್ ಶುಗರ್ಸ್ ಲಿ., ತುಮಕೂರು, ಶಹಪುರ ತಾಲ್ಲೂಕು, ಯಾದಗಿರಿ ಜಿಲ್ಲೆ | 644276 | 58270 | 10.66 | 3175 |

ಆದೇಶವನ್ನು ನನ್ನ ಹಸ್ತಾಕ್ಷರ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ 18.10.2022 ಇಂದು ಹೊರಡಿಸಿರುತ್ತೇನೆ.

Commissioner for Cane Development Director of Sugar & Agricultural Marketing of Co-op Societies, Karnataka ★ BANGALORE

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

ಇವರಿಗೆ:
ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳ
ವ್ಯವಸ್ಥಾಪಕ ನಿರ್ದೇಶಕರು/
ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.

ಪ್ರತಿಯನ್ನು:
1) ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಜಿಲ್ಲಾಧಿಕಾರಿಗಳು, ಬೆಳಗಾವಿ/ ಬಾಗಲಕೋಟೆ/ ವಿಜಯಪುರ/ ಉತ್ತರ ಕನ್ನಡ/ ಹಾಸನ/ ಗದಗ/ ಹಾವೇರಿ/ ಬೀದರ್/ ಕಲಬುರಗಿ/ ಯಾದಗಿರಿ/ ದಾವಣಗೆರೆ/ ಬಳ್ಳಾರಿ/ ಮಂಡ್ಯ/ ಮೈಸೂರು/ ಚಾಮರಾಜನಗರ/ ವಿಜಯನಗರ ಇವರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

Ns